## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 195
2. ಮಾನ್ಯ ಸದಸ್ಯರ ಹೆಸರು : ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 11/07/2018
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕಾರ್ಖಾನೆಗಳು, ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ದುಡಿಯುವ ನೌಕರರಿಗೆ ಅಲ್ಲಿನ ಆಡಳಿತ ಮಂಡಳಿಗಳು ಮೂಲ ಸೌಲಭ್ಯಗಳು ಹಾಗೂ ವೇತನವನ್ನು ಸರಿಯಾಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾರ್ಖಾನೆಗಳು, ಗಾರ್ಮೆಂಟ್ಸ್ ಕಾರ್ಖಾನೆಗಳು ಸೇರಿದಂತೆ, ಎಲ್ಲಾ ಕಾರ್ಖಾನೆಗಳಲ್ಲೂ ದುಡಿಯುವ ನೌಕರರಿಗೆ ಸರ್ಕಾರವು ಕನಿಷ್ಠ ವೇತನ ಕಾಯ್ದೆ, 1948 ಮತ್ತು ಕರ್ನಾಟಕ ನಿಯಮಾವಳಿ 1958ರಡಿ ಕನಿಷ್ಠ ವೇತನವನ್ನು ನಿಗಧಿಪಡಿಸಿರುತ್ತದೆ. ಸದರಿ ಕನಿಷ್ಠ ವೇತನ ದರಗಳಿಗೆ ಅನುಗುಣವಾಗಿ ಕೆಲವು ಕಾರ್ಖಾನೆಗಳು ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ. | ಬಂದಿದ್ದಲ್ಲಿ, ಮೂಲಸೌಕರ್ಯಗಳು ಹಾಗೂ ವೇತನ ನೀಡದ ಕಾರ್ಖಾನೆಗಳ ಮತ್ತು ಗಾರ್ಮೆಂಟ್ಸ್ ಫ್ಯಾಕ್ಟರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಕನಿಷ್ಠ ವೇತನ ಕಾಯ್ದೆ, 1948ರಡಿ ಸರ್ಕಾರವು ನಿಗಧಿಪಡಿಸಿರುವ ಕನಿಷ್ಠ ವೇತನ ದರಕ್ಕಿಂತ ಕಡಿಮೆ ವೇತನ ನೀಡುತ್ತಿರುವ ಸಂಸ್ಥೆಗಳ ವಿರುದ್ಧ ಸಕ್ಷಮ ಪ್ರಾಧಿಕಾರದ ಮುಂದೆ ಕ್ಲೇಮ್ ಅರ್ಜಿಗಳನ್ನು ಸಲ್ಲಿಸಿ, ವ್ಯತ್ಯಾಸದ ವೇತನವನ್ನು ಪಡೆಯಲು ಅವಕಾಶವಿರುತ್ತದೆ. ವೇತನ ಪಾವತಿ ಮಾಡದೇ ಇರುವ ಪ್ರಕರಣಗಳಲ್ಲಿ ವೇತನ ಪಾವತಿ ಕಾಯ್ದೆ, 1936ರಡಿ ಕ್ಲೇಮ್ ಅರ್ಜಿಗಳನ್ನು ಸಲ್ಲಿಸಿ ವೇತನವನ್ನು ಪಡೆಯಲು ಅವಕಾಶವಿರುತ್ತದೆ. ಕನಿಷ್ಠ ವೇತನ ಕಾಯ್ದೆ, 1948 ಹಾಗೂ ವೇತನ ಪಾವತಿ ಕಾಯ್ದೆ, 1936ರಡಿ ಸರ್ಕಾರದಿಂದ ನೇಮಕಗೊಂಡ ಪ್ರಾಧಿಕಾರಿಗಳಲ್ಲಿ ಸ್ವೀಕೃತವಾಗಿರುವ ಕ್ಲೇಮ್ ಅರ್ಜಿಗಳಿಗೆ ಸಂಬಂಧಿಸಿದಂತೆ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ. |

| ಕಾಯ್ದೆ | ಕ್ಲೇಮ್ ಅರ್ಜಿಗಳ ಸಂಖ್ಯೆ | ಕ್ಲೇಮ್ ಮೊತ್ತ | ಕಾರ್ಮಿಕರ ಸಂಖ್ಯೆ |
|---|---|---|---|
| ಕನಿಷ್ಠ ವೇತನ ಕಾಯ್ದೆ, | 105 | 5,42,25,185/- | 1,195 |
| ವೇತನ ಪಾವತಿ ಕಾಯ್ದೆ | 105 | 4,16,90,699/- | 412 |

<table>
<tr><td></td><td></td><td>ಕಾರ್ಖಾನೆಗಳ ಕಾಯ್ದೆ, 1948ರಡಿ ಮೂಲಸೌಕರ್ಯಗಳು ಹಾಗೂ ನಿಯಮಾನುಸಾರ ವೇತನ ನೀಡದ ಕಾರ್ಖಾನೆಗಳ ಮತ್ತು ಗಾರ್ಮೆಂಟ್ಸ್ ಫ್ಯಾಕ್ಟರಿಗಳ ಮಾಲೀಕರ ವಿರುದ್ಧ ಮೊಕದ್ದಮೆ ಹೂಡುವ ಮುಖಾಂತರ ಕ್ರಮ ಕೈಗೊಳ್ಳಲಾಗಿರುತ್ತದೆ. 2017-18ನೇ ಸಾಲಿನಲ್ಲಿ ಮೂಲ ಸೌಕರ್ಯಗಳು ಹಾಗೂ ವೇತನ ನೀಡದಿರುವ ಕಾರ್ಖಾನೆಗಳ ಮತ್ತು ಗಾರ್ಮೆಂಟ್ಸ್ ಫ್ಯಾಕ್ಟರಿಗಳ ವಿರುದ್ಧ ಕಾರ್ಖಾನೆಗಳು ಮತ್ತು ಬಾಯ್ಲರುಗಳ ಇಲಾಖೆಯು ಹೂಡಿರುವ ಮೊಕದ್ದಮೆಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಸಂ</th><th>ಕಾರ್ಖಾನೆಗಳು</th><th>ಕಾರ್ಖಾನೆಗಳ ಕಾಯ್ದೆ ಅಡಿ</th><th>ವೇತನ ಸಂದಾಯ ಕಾಯ್ದೆ ಅಡಿ</th></tr>
<tr><td>1</td><td>ಕಾರ್ಖಾನೆಗಳು</td><td>27</td><td>06</td></tr>
<tr><td>2</td><td>ಗಾರ್ಮೆಂಟ್ಸ್ ಫ್ಯಾಕ್ಟರಿಗಳು</td><td>05</td><td>–</td></tr>
<tr><td></td><td>ಒಟ್ಟು</td><td>33</td><td>06</td></tr>
</table></td></tr>
<tr><td>ಇ</td><td>ರಾಜ್ಯದಲ್ಲಿ ಎಲ್ಲಾ ತರಹದ ಕಾರ್ಖಾನೆಗಳು ಗಾರ್ಮೆಂಟ್ಸ್ ಫ್ಯಾಕ್ಟರಿಗಳ (ಕೋಳಿ ಫಾರಂಗಳು ಒಳಗೊಂಡಂತೆ) ಒಟ್ಟು ಸಂಖ್ಯೆ ಎಷ್ಟು; ಅವು ಯಾವುವು;</td><td>ರಾಜ್ಯದಲ್ಲಿ ನೊಂದಾವಣಿಗೊಂಡ ಒಟ್ಟು ಕಾರ್ಖಾನೆಗಳ ಸಂಖ್ಯೆ : 16,596 ಹಾಗೂ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರಡಿ ನೋಂದಣಿಯಾಗಿರುವ ಕೋಳಿ ಫಾರಂಗಳ ಒಟ್ಟು ಸಂಖ್ಯೆ: 79 ಆಗಿರುತ್ತದೆ. ಕಾರ್ಖಾನೆಗಳು ಮತ್ತು ಗಾರ್ಮೆಂಟ್ಸ್ ಫ್ಯಾಕ್ಟರಿಗಳ ವಿವರ ಅನುಬಂಧ-1 ಸಿ.ಡಿ ರಲ್ಲಿ ಒದಗಿಸಿದೆ.</td></tr>
<tr><td>ಈ</td><td>ಇಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ಕಾರ್ಖಾನೆವಾರು ಮಾಹಿತಿ ಒದಗಿಸುವುದು)</td><td>ನೊಂದಾವಣಿಗೊಂಡ ಕಾರ್ಖಾನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ: 16,91,249 (ಕಾರ್ಖಾನೆವಾರು ಮಾಹಿತಿಯನ್ನು CD (ಅನುಬಂಧ-1) ರೂಪದಲ್ಲಿ ಸಲ್ಲಿಸಲಾಗಿದೆ.)<br><br>ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರಡಿ ನೋಂದಣಿಯಾಗಿರುವ ಕೋಳಿ ಫಾರಂಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಒಟ್ಟು ಸಂಖ್ಯೆ: 706 ಆಗಿರುತ್ತದೆ.</td></tr>
<tr><td>ಉ</td><td>ಸದರಿ ಕಾರ್ಖಾನೆಗಳು ಮತ್ತು ಗಾರ್ಮೆಂಟ್ಸ್ ಗಳಲ್ಲಿ ನೌಕರರಿಗೆ ಒದಗಿಸುತ್ತಿರುವ ಮೂಲ ಸೌಲಭ್ಯಗಳು ಮತ್ತು ನಿಗಧಿಪಡಿಸಿರುವ ವೇತನ ಎಷ್ಟು; ಹುದ್ದೆವಾರು ನೀಡುತ್ತಿರುವ ವೇತನದ ವಿವರ ಒದಗಿಸುವುದು.</td><td>ಕಾರ್ಖಾನೆಗಳ ಕಾಯ್ದೆ ಹಾಗೂ ನಿಯಮಗಳಡಿ ಕಾರ್ಖಾನೆಗಳಲ್ಲಿ ಹಾಗೂ ಗಾರ್ಮೆಂಟ್ಸ್, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲು ನಿಯಮಗಳನ್ನು ಅನುಷ್ಠಾಗೊಳಿಸಲಾಗುತ್ತಿರುತ್ತದೆ.<br><br>ಕನಿಷ್ಠ ವೇತನ ಕಾಯ್ದೆ, 1948ರ ಪ್ರಾವಧಾನಗಳನ್ವಯ ಕಾರ್ಖಾನೆಗಳು ಮತ್ತು ಗಾರ್ಮೆಂಟ್ಸ್ ಕಾರ್ಖಾನೆಗಳು</td></tr>
</table>

| | | |
|---|---|---|
| | | ಸೇರಿದಂತೆ ಒಟ್ಟು ಎಂಬತ್ತೆರಡು (82) ಅನುಸೂಚಿತ ಉದ್ದಿಮೆಗಳಿಗೆ ರಾಜ್ಯ ಸರ್ಕಾರವು ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದ್ದು, ಅದರ ವಿವರಗಳನ್ನು ಸಿಡಿಯಲ್ಲಿ ಅನುಬಂಧ-2 ರಲ್ಲಿ ಒದಗಿಸಿದೆ. |
| ಊ | ಕಾರ್ಖಾನೆಗಳಲ್ಲಿ ದುಡಿಯುವ ನೌಕರರನ್ನು ಕೆಲಸದಿಂದ ಏಕಾಏಕಿ ತೆಗೆದುಹಾಕದಂತೆ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು? | ಕಾರ್ಖಾನೆಗಳಲ್ಲಿ ದುಡಿಯುವ ನೌಕರರನ್ನು ಕೆಲಸದಿಂದ ಏಕಾಏಕಿ ತೆಗೆದುಹಾಕದಂತೆ ಸರ್ಕಾರ ಕೈಗೊಂಡಿರುವ ಪ್ರಮುಖವಾದ ಮುಂಜಾಗ್ರತಾ ಕ್ರಮಗಳು ಈ ಕೆಳಕಂಡಂತಿರುತ್ತವೆ.<br>1) ಕೈಗಾರಿಕೆಗಳಲ್ಲಿ ಕಾರ್ಮಿಕರ ಹಕ್ಕುಗಳನ್ನು ಕಾಪಾಡಲು "ಕಾನೂನು ಅರಿವು-ನೆರವು ಕಾರ್ಯಕ್ರಮ" ಗಳನ್ನು ಆಯೋಜಿಸಲಾಗುತ್ತಿದೆ.<br>2) 1947ರ ಕೈಗಾರಿಕ ವಿವಾದಗಳ ಕಾಯದೆ, 1946ರ ಔದ್ಯೋಗಿಕ ಉದ್ಯೋಗಗಳ (ಸ್ಥಾಯೀ ಆದೇಶಗಳು) ಕಾಯ್ದೆ ಹಾಗೂ ಇತರ ಕಾರ್ಮಿಕರ ಕಾಯ್ದೆಗಳ ಪ್ರಾವಧಾನಗಳನ್ವಯ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಬೇಕಾದಲ್ಲಿ ಸ್ವಾಭಾವಿಕ ನ್ಯಾಯತ್ವಗಳು ಹಾಗೂ ಕಾರ್ಮಿಕರ ಕಾನೂನುಗಳ ವಿಧಿ ವಿಧಾನಗಳನ್ನು ಪಾಲಿಸಬೇಕಾಗಿರುತ್ತದೆ.<br>3) 1926ರ ವೃತ್ತಿಪರ ಸಂಘಗಳ ಕಾಯ್ದೆಯನ್ವಯ ಕಾರ್ಮಿಕ ಸಂಘಗಳು ವಿವಾದವನ್ನು ಹುಡುವ ಅವಕಾಶವಿರುತ್ತದೆ.<br>4) ಕಾರ್ಮಿಕ ಇಲಾಖೆಯು 1947ರ ಕೈಗಾರಿಕಾ ವಿವಾದಗಳ ಕಾಯ್ದೆಯ ಪ್ರಾವಧಾನಗಳನ್ವಯ ಸಂಭವನೀಯ ಅಥವಾ ವಾಸ್ತವ ಕೈಗಾರಿಕಾ ವಿವಾದಗಳನ್ನು ರಾಜೀ ಸಂಧಾನದ ಮೂಲಕ ಪರಿಹರಿಸುವ ಕ್ರಮ ಕೈಗೊಳ್ಳುತ್ತದೆ. |

ಕಾಇ 43 ಕಾಬಾನಿ 2018

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು